Reg-l. No M. 1299 'SATYAVADI Founded 1917

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 243 | ಶನಿವಾರ 24—5—47 | ಬಿಡಿ ಪ್ರತಿ 3 ಪೈ

## ಇಡೀ ಭಾರತದ ಆಕ್ರಮಣಕ್ಕಾಗಿ ಲೀಗಿನ ಯೋಜನೆ

ಜನರಲ್ಲಿ ವೈಮನಸ್ಯವುಂಟುಮಾಡುವಾಗ ಕಾಂಗ್ರೆಸ್ ಏಕೆ ಇಂಥಹ ಪಕ್ಷಪಾತ ತೋರುತ್ತಿದೆ ? ಪಾಕೀಸ್ತಾನವನ್ನು ಕೂಡಲೂ ಸಿದ್ಧವಿರುವವರು ಈ ರೀತಿ ಮಾಡುವುದು ತುಂಬಾ ಅನ್ಯಾಯ ! ಇದನ್ನು ಕೂಡಲೇ ನಿಲ್ಲಿಸುವುದು ಯುಕ್ತವಾಗಿದೆ. ಎಂದು ಬರೆದಿದೆ.

### ಧರ್ಮವೀರನಿಗೆ ಚಪೇಟಿಕಾ ಪ್ರಹಾರ

ದೆಹಲಿ ಮೆ. 4

ಈ ದಿನ ಬೆಳಿಗ್ಗೆ ಶ್ರೀ ಶಿವದಾಸಂವರ ಸೇನಾನಾಯಕತ್ವದಲ್ಲಿ 20 ಜನ ವೀರರು ಕೀರ್ತನಾಪೂರ್ವಕವಾಗಿ ಶ್ರೀ ನೆಪರೂರವರ ಮನೆಯ ಮುಂದೆ ಸತ್ಯಾಗ್ರಹ ಮಾಡಿದರು. ಆಗ ಅವರ ಮೇಲೆ ಲಾಠಿ ಪ್ರಹಾರವಾಯಿತು. ಕೆಲವರಿಗೆ ತುಂಬಾ ಘಾಯವಾಗಿದೆ. ಈ ಪೈಕಿ ಶ್ರೀ ಗಣೇಶರಾಮಅಗ್ರವಾಲಎಂಬುವವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಶ್ರೀ ಪಟೇಲರ ಮನೆಯ ಮುಂದೆಯೂ 18 ಜನರು ಸತ್ಯಾಗ್ರಹ ಮಾಡಿದರು. ಅವರನ್ನು ನೆಹರೂರವರ ಮನೆ ಮುಂದೆ ಸತ್ಯಾಗ್ರಹ ಮಾಡಿದ 20 ಜನರಂತೂ ಬಂಧಿಸಲಾಯಿತು.

ದೆಹಲಿ ಮೆ 5

ಶ್ರೀ ನೆಹರೂರವರ ಮನೆ ಮುಂದೆ ಧರ್ಮವೀರರು ಸತ್ಯಾಗ್ರ ಮಾಡುತ್ತಿರುವಾಗ್ಗೆ ಶ್ರೀ ನೆಹರೂರವರು ಸ್ವಯಂ ಧರ್ಮವೀರರನ್ನು ಕತ್ತು ಹಿಡಿದು ಕೆಳಕ್ಕೆ ತಳ್ಳಿದರು. ಅಷ್ಟೇ ಅಲ್ಲದೆ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಕಾರಿನ ಮುಂದೆ ಸತ್ಯಾಗ್ರಹ ಮಾಡಿದ ಧರ್ಮವೀರನನ್ನು ಹೊಡೆಸಿದ್ದಲ್ಲದೇ ಶ್ರೀಮತಿಯವರು ತಾವಾಗಿ ಕಾರಿಂದ ಇಳಿದು ಒಬ್ಬ ಧರ್ಮವೀರನ ಮುಖಕ್ಕೆ ಏಟು ಕೊಟ್ಟರು ಆಗ ಆ ಧರ್ಮವೀರನು ಶ್ರೀಮತಿಯವರಿಗೆ ಶಾಂತರೀತಿಯಿಂದ ಹೀಗೆ ಹೇಳಿದನು ' ತಾಯಿ ಸ್ವಜನರನ್ನು ದೇಶದ ಸ್ವಭಾಂಧವರಾದ ನಮ್ಮನ್ನು ಹೊಡೆದಿದ್ದರಿಂದ ನೀನೇ ನಿಜವಾಗಿಯೂ ಭಾರತದ ಹಿಂದಿನ ಆಸ್ಥಾನಸ್ತಿಯರಿಗೂ ಮೀರಿದ ಅಧರ್ಮರವಣಿಯಾಗಿದ್ದೀಯೆ.

ಅಯೋಧ್ಯೆಯಿಂದ ಸತ್ಯಾಗ್ರಹಕ್ಕಾಗಿ ಬಂದ 15 ಜನ ಸಾಧುವೀರರು ಬಂಧಿತರಾದರು ಅವರ ನಾಯಕರಾದ ಶ್ರೀ ಭಗವಾನ್ ದಾಸರು ಈ ಧರ್ಮಯುದ್ಧಕ್ಕೆ ನಮ್ಮಂಥಹ ಸಾಧುಗಳು ಇನ್ನು ಸಹಸ್ರಾರು ಜನರ್ಯಿರುತ್ತಾರೆ ಎಂದು ಹೇಳಿದರು.

ಕಾಶೀ ಧರ್ಮ ಸಂಘ ವಿದ್ಯಾಲಯದ ನ್ಯಾಯಾಧ್ಯಾಪಕರಾದ ಶ್ರೀ ರಮಾಕಾಂತ ಶಾಸ್ತ್ರಿಗಳವರ ನೇತೃತ್ವದಲ್ಲಿ 17 ಜನ ಧರ್ಮವೀರರು ಶ್ರೀ ನೆಹರೂ ಶ್ರೀ ಪಟೇಲರ ಮನೆ ಮುಂದೆ ಸತ್ಯಾಗ್ರಹ ಮಾಡಿ ಬಂಧಿತರಾದರು.

ಲಾಹೋರ್ ಕಾರಾಗೃಹದಲ್ಲಿ ಶ್ರೀ ಸ್ವಾಮಿ ಕರಪಾತ್ರಜೀಯವರು 5 ನೇ ತಾರೀಖಿಗೆ ತಮ್ಮ 8 ನೇ ದಿನದ ಉಪವಾಸವನ್ನು ಸುಖವಾಗಿ ಕಳೆದರು ಬೇಹದಲ್ಲಿ ಅಶಕ್ತತೆ ಜಾಸ್ತಿಯಾಗಿದೆ ಆದರೂ ಸಂತೋಷದಿಂದಿದ್ದಾರೆ. ಈದೇ ದಿನ ಬೆಳಿಗ್ಗೆ ಅಮೇರಿಕಾ ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿ ಮತ್ತು ಚೀನಾದೇಶದ ಯುನೈಟೇಡ್ ಪ್ರೆಸ್ ಪ್ರತಿನಿಧಿಗಳು ಶ್ರೀ ಸ್ವಾಮೀಜಿಯವರನ್ನು ಸಂದರ್ಶಿಸಿ ಮಾತುಕತೆ ನಡೆಸಿದರು ಮತ್ತು ಧರ್ಮಯುದ್ಧದ ಭಾವಚಿತ್ರಗಳನ್ನು ತೆಗೆದುಕ್ಕೊಂಡರು.

[ಸೋಮವಾರ ಪತ್ರಿಕೆಯಲ್ಲಿ ಮುಂದುವರಿಯುವುದು ]

## ಮಹಾ ಮಹೋಪಾಧ್ಯಾಯರುಗಳ ಭಾಷಣ

ಜಗದ್ವಿಖ್ಯಾತ ಪಂಡಿತ ಪ್ರಕಾಂಡ ವಿ॥ ನಿ॥ ಶ್ರೀ ಗಿಂಧರ ಶರ್ಮ, ಚತುರ್ವೇದರೂ ಮತ್ತು ಕಾಶೀ ಹಿಂದೂ ವಿಶ್ವವಿದ್ಯಾಲಯದ ಪಿನ್ಸಿಪಾಲರಾದ ವಿ॥ ವಿ॥ ಶ್ರೀ ಚಿನ್ನಸ್ವಾಮಿ ಶಾಸ್ತ್ರಿಗಳೇ ಮೊದಲಾದ ವಿಖ್ಯಾತರು ಧರ್ಮ ಯುದ್ಧದ ಪರಿಸ್ಥಿತಿಯನ್ನರಿಯಲು ದೆಹಲಿಗೆ ಬಂದಿದ್ದಾರೆ. ಶ್ರೀ ಗಿಂಧರ ಶರ್ಮರು ಸಭೆಯಲ್ಲಿ ಮಾತನಾಡುತ್ತಾ ' ನನಗೀಗ 84 ವರ್ಷಗಳಾಗಿವೆ. ಆದರೂ ಧರ್ಮ ಯುದ್ಧದಲ್ಲಿ ಪ್ರಾಣ ದಾನಮಾಡಲು ಒಂದಿದ್ದೇನೆ ಈಗ ಯುವಕರೂ ಹುಡುಗರೂ ವೃದ್ಧರೂ ಇದರಲ್ಲಿ ಭಾಗಿಗಳಾಗಿ ಹಿಂದೂ ಧರ್ಮವನ್ನು ಕಾಪಾಡಬೇಕು ಇಲ್ಲದೂಡೆ ಅವರು ಧರ್ಮದ್ರೋಹಿ ದೈವ ದ್ರೋಹಿಗಳಾಗುತ್ತಾರೆ ಎಂದು ಹೇಳಿದರು. ಶ್ರೀ ಚಿನ್ನಸ್ವಾಮಿ ಶಾಸ್ತ್ರಿಗಳೂ ಸಹ ಮಾತನಾಡಿ ತಾವು ಧರ್ಮ ಯುದ್ಧದಲ್ಲಿ ಬಲಿದಾನ ಮಾಡಲು ಸಿದ್ಧರಿರುವುದಾಗಿ ತಿಳಿಸಿದರು.

## ದಸ್ತಗಿರಿ ಮಾಡಿದ್ದು ಅನ್ಯಾಯ ! !

ದೆಹಲಿಯ ಪ್ರಮುಖ ಕಾಂಗ್ರೆಸ್ ಪತ್ರಿಕೆಯಾದ ' ಹಿಂದೂಸ್ತಾನ್ ' ನಲ್ಲಿ ಸಂಪಾದಕೀಯವು ಸತ್ಯವನ್ನು ಎತ್ತಿ ಹಿಡಿದಿದೆ. 30-4-47 ರ ಹಿಂದೂಸ್ತಾನ್ ಸಂಪಾದಕೀಯದ ಸಾರಾಂಶ ಇಂತಿದೆ — ' ಪ್ರದರ್ಶನ ಮಾಡಿದವರನ್ನು ಬಂಧಿಸುವುದು ಸರಿಯೋ ತಪ್ಪೋ ನಾವು ವಿಮರ್ಶಿಸುವುದಿಲ್ಲ ! ಆದರೆ ಕಾಂಗ್ರೆಸ್ಸು ತಾತ್ಕಾಲಿಕ ಸರ್ಕಾರಕ್ಕೆ ಹೊಕ್ಕಲಾಗಾಯ್ತು ನಾವು ನೋಡುತ್ತಿದ್ದೇವೆ ಮುಸ್ಲಿಮರು ಎರಡು ಪ್ರದರ್ಶನವನ್ನು ಹೊರಗೆ ಎಳಗೆ ಸೆಕ್ರೆಟರಿಯೇಟಿನಲ್ಲಿ ಅಷ್ಟೇ ಏಕೆ ಕಾಂಗ್ರೆಸ್ ಮಂತ್ರಿಗಳ ಮನೆಗಳಲ್ಲೂ ವಿರುದ್ಧ ಪ್ರಚಾರ ಹೊಡೆದಾಟ ನಡೆಸಿದ್ದಾರೆ ಎಲ್ಲಡೆಯೂ ಅತ್ಯಾಚಾರ ರಕ್ತ ಪಾತ ನಡೆಸಿದ್ದಾರೆ ಅದರೂ ಅವರನ್ನು ಬಂಧಿಸುವ ಗೋಜಿಗೆ ಕಾಂಗ್ರೆಸ್ ಸರ್ಕಾರ ಹೋಗಲಿಲ್ಲ ! ! ಆದರೆ ಶಾಂತ ರೀತಿಯಿಂದ ತಮ್ಮ ಬೇಡಿಕೆಗಳಿಗಾಗಿ ಪ್ರದರ್ಶನ ಮಾಡುತ್ತಿರುವ ಸನಾತನಿಗಳ ಮೇಲೆಕೆ ಇಷ್ಟು ಕೋಪ ? ಹಿಂದೂ ಮುಸ್ಲಿಂ ಈ ಎರಡು

ಧ- ಯುದ್ಧ ಸ. ಬುಲೆಟಿನ್

ಪ್ರಚಾರಕ—ರಾಜಾ ಎಸ್ ಗುರುರಾಜಾಚಾರ್ಯ. ಅಖಿಲ ಕರ್ನಾಟಕ ಸೇನಾತನಿಗಳ ಸಂಘ, ಮಂತ್ರಾಲಯ.

## ಪಾಕಿಸ್ತಾನ ಗೆದ್ದನಂತರ

' ಸಂಜೆ ಟೈಮ್ಸ್ ' ಪತ್ರಿಕೆ ಸವದೆಹಲಿ ಸುದ್ದಿಗಾರ ಈ ರೀತಿ ತಿಳಿಸುತ್ತಾನೆ:- ಭಾರತದ ಅಧಿಕಾರ ಹಸ್ತಾಂತರ ಬಗ್ಗೆ ವೈಸ್ರಾಯಿ ಯೋಜನೆಯ ಹೊರಗೆರೆಗಳು ಭಾರತ ನಾಯಕರುಗಳಿಗೆ ಗೊತ್ತಾಗಿವೆ. ಮತ್ತು ಅವುಗಳನ್ನು ಒಪ್ಪಿಕೊಳ್ಳುವುದು ಕಾಲೋಚಿತವಾಗಿದೆ. ಬ್ರಿಟಿಷ್ ನಿರ್ಗಮನನಾಂತರ ಹಿಂದೂ—ಮುಸ್ಲಿಂ ಬಾಂಧವ್ಯ ಶಾಶ್ವತವಾಗಿ ಇರುವುದೆಂದು ನಂಬುವ ಯಾವ ನಾಯಕನನ್ನೂ ನಾನು ಬೇಟ ಮಾಡಿಲ್ಲ, ಮುಸ್ಲಿಂ ಲೀಗು ಈಗ ದೊರೆಯುವ ಪಾಕೀಸ್ತಾನ, ಒಪ್ಪಿಕೊಳ್ಳದಿರುವಷ್ಟು ಬಲವಾಗಿಲ್ಲ. ಆ ಬಗೆಯ ಪಾಕೀಸ್ತಾನ ಬಹಳ ಕಾಲವಿರದೆ, ಮುಸ್ಲಿಂ ಲೀಗು ಕ್ರಾಂತಿಯುತ ದಂಡೆಯಾತ್ರೆಯನ್ನು ಅದಷ್ಟು ಸುಯೋಗನೇಳೆಯಲ್ಲಿ ಕೈಗೊಳ್ಳುತ್ತದೆ. ಎಂದು ಜವಾಜ್ಹಾರಿಯುತ ಲೀಗ್ ವ್ಯಕ್ತಿಯಿಂದ ಗೊತ್ತಾಗಿದೆ.

## ದ. ಆಫ್ರಿಕಾಕ್ಕೆ ಹೈಕಮಿಷನರನ್ನು ಕಳುಹಲು

### ಪಂ॥ ನೆಹರು ನಿರಾಕರಿಸಿದರು

ಕೇಪ್‌ಟವ್ನ್ ಮೇ 22 — ದಕ್ಷಿಣ ಆಫ್ರಿಕಾ ಪ್ರಧಾನಿ ಫೀ॥ ಮಾ॥ ಸ್ಮಟ್ಸ್ ಈದಿನ ಸ, ನೇಟಾಲ್ ಭಾರತೀಯ ಸಂಘದ ಪ್ರತಿನಿಧಿಗಳೊಂದಿಗೆ ಭೇಟಿ ಮಾಡಿದ ನಂತರ, ಭಾರತ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷ ಪಂ॥ ನೆಹರು ಯೂನಿಯನ್ ಸರ್ಕಾರದೊಡನೆ ಪರಸ್ಪರ ಬಾಂಧವ್ಯವನ್ನು ವೃದ್ಧಿ ಗೊಳಿಸುವುದಕ್ಕೆ ಆಶೆಯನ್ನು ವ್ಯಕ್ತ ಪಡಿಸಿರುವುದರ ಹೇಳಿಕೆಯನ್ನು ಅವರು ತೆಗೆದುಕೊಂಡಿರುವುದಾಗಿ ಹೇಳಿದರು. ಪಂ॥ ನೆಹರು ರವರನ್ನು ಇಲ್ಲಿಗೆ ಹೈಕಮಿಷನರನ್ನು ಕಳಿಸಿ ಎಂದು ಸ್ಮಟ್ಸ್ ಉತ್ತರ ವೀಯಲು ಈಗ ಸಾಧ್ಯವಿಲ್ಲ ಎಂದಿದ್ದಾರಂತೆ ನೆಹರು.

— —

ಲಂಡನ್ ಮೆ 23 — ಭಾರತ ಅಧಿಕಾರ ಹಸ್ತಾಂತರ ಬಗ್ಗೆ ವೈಸ್ರಾಯಿ ಯೋಜನೆಯನ್ನು ಬ್ರಿಟಿಷ್ ಮಂತ್ರಿ ಮಂಡಳ ಅಂಗೀಕರಿಸಿವೆ.

ವಾಣಿಪುರ ಮೆ. 22 — ವಾಣಿಪುರ ಒರ್ಮಾಕ್ಕೆ ಸೇರಿದ ಭಾರತದಲ್ಲೇ ಇತಲು ಇಚ್ಛಿಸಿವೆ

ಲಂಡನ್ ಮೆ. 22 — ಭಾರತದ ಸೇನೆಯ ಭವಿಷ್ಯದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಕೇಳಲ್ಪಟ್ಟ ಪ್ರಶ್ನೆಗೆ ಯಾವ ಧೋರವಸೆಯನ್ನು ಅಟ್ಲಿ ಕೊಡಲು ನಿರಾಕರಿಸಿದರು.

## ವರ್ತಮಾನ ಸಂಗ್ರಹ

ಬೆಂಗಳೂರು ಮೇ 21 — ಭಟ್ಕಳ್ ರೇವಿನ ಯೋಜನೆ ಸಂಬಂಧದ ವಿಚಾರವಾಗಿ ಪರ್ಯಾಲೋಚಿಸಲು ಭಾರತ ಸರಕಾರವು ಇದಕ್ಕೆ ಸಂಬಂಧಿಸಿದ ಸರಕಾರದ ಸಮ್ಮೇಳನವನ್ನು ಬೊಂಬಾಯಿನಲ್ಲಿ ಜೂ 10 ರಲ್ಲಿ ನಡೆಸಲು ಏರ್ಪಡಿಸಿದೆ.

ಂ ಂ

ಸಿಲ್ಹೆಟ್ ಮೇ 10— ಕೋರ್ಟಿನ ಎದುರಿಗೆ ಮಂತ್ರಿಮಂಡಲ ವಿರೋಧ ಘೋಷಣೆ ಕೂಗುತ್ತಾ ಗಲಾಟೆ ಮಾಡಿದ 3 ಮಂದಿ ಲೀಗಿನವರಿಗೆ ಕೋರ್ಟಿಗೆ ಅಗೌರವ ಮಾಡಿದ ಅಪವಾದನೆ ಮೇಲೆ 1 ತಿಂಗಳು ಸಜಾ ವಿಧಿಸಲಾಯಿತು.

ಂ ಂ

ಜರೂಸೆಲಂ ಮೇ 21 — ಅಡಬ್ಬಿಯವರು ಯಹೂದ್ಯ ಸಾಮಿಗ್ರಿ ಬಹಿಷ್ಕಾರವನ್ನು ತೀವ್ರಗೊಳಿಸುತ್ತಿದ್ದಾರೆ.

ಂ ಂ

ಲಂಡನ್ ಮೆ 22— ಆಂಗ್ಲೋ ಅಮೇರಿಕ ಸಹಕಾರವು ರಷ್ಯಾದ ಮೇಲೆ ಅಥವಾ ರಷ್ಯಾದಿಂದೆ ಯುದ್ಧ ನಡೆಯುವುದನ್ನು ತಪ್ಪಿಸುವುದೆಂದು ಲೇಬರ್ ಸರಕಾರದ ಅಭಿಪ್ರಾಯ.

ಬೆಂಗಳೂರು ಮೆ 22 — ಮದರಾಸಿನ ಹಿಲ್ಬನ್ನರ ಖೂನಿ ಸಂಬಂಧದಲ್ಲಿ ಬೆಂಗಳೂರಿನಲ್ಲಿ ಒಬ್ಬ ಆಂಗ್ಲೋ ಇಂಡಿಯರ್ ದಸ್ತಗಿರಿಮಾಡಲ್ಪಟ್ಟನು.

ಂ ಂ

ಬೆಂಗಳೂರು ಮೆ 23— ಶ್ರೀ ಬಿ ಎಸ್. ಸೋಸಾಲರಾಯರ ಪತ್ನಿ ಶ್ರೀಮತಿ ಲಕ್ಷ್ಮೀ ಬಾಯಿಯವರು ಹಲವು ಅಭರಣಗಳು ತಮಗೆ ಸೇರಿದ್ದೆಂದು ಕ್ಲೇಮ್ ಅರ್ಜಿಯನ್ನು ಸಲ್ಲಿಸಿದ್ದಾರೆ

ಂ ಂ

ಬೆಂಗಳೂರು ಮೆ 23— ಹಿತ್ತಾಳೆ ಅಕ್ಷೌಹಿಣಿ ಕಾಸು ಮತ್ತು ಗುಂಡುಗಳನ್ನು ಭಂಗಾರದ್ದೆಂದು ಹೇಳಿ ಮಾರಿದ ಪೋಸಕ್ಕಾಗಿ ಇಬ್ಬರು ದಸ್ತಗಿರಿ ಮಾಡಲ್ಪಟ್ಟಿದಾರೆ.

ಂ ಂ

ರಂಗೂನ್ ಮೇ 21 — ಬರ್ಮಾಕ್ಕೆ 40 ವರೆ ಕೋಟಿ ರೂಪಾಯಿ ಸಾಲವನ್ನು ಬ್ರಿಟಿಷ್ ಕೊಡುವುದಕ್ಕಿದೆ.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

Edited, Printed and Published by M. S Krishna Rao at the Satyavadi Press Chamaraj Agrahar, Mysore.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀನೇ ಬೆರಗಾಗುವಿರಿ.

ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

At Opera
6 ನೇ ವಾರ
ಟಿ. ಎಸ್. ಬಾಲಯ್ಯ,
ತಪಮಣಿದೇವಿ, ಮಾಲತಿ,
ರಾಮುಚಂದ್ರ ನಟಿಸಿರುವ
ರಾಜಕುಮಾರಿ
(ತಮಿಳು)

SHAKTI
SUDHA
A Superb TONIC



ರೇಡಿಯೋ ಮೂಲಕ ಅಡಿಗೆ ಮಾಡುವುದು